**ದಿನಾಂಕ 02-02-2019ರ ಶನಿವಾರ ಬೆಳಗ್ಗೆ ವಾರ್ಡ್ ಸಂಖ್ಯೆ81 ವಿಜ್ಞಾನನಗರ ವಾರ್ಡಿನ ಮಾನ್ಯ ಪಾಲಿಕೆ ಸದಸ್ಯರು, ಅಧ್ಯಕ್ಷರು ನಗರಯೋಜನೆ ಸಮಿತಿ ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರಾದಂತಹ ಶ್ರೀ. ಎಸ್.ಜಿ. ನಾಗರಾಜ್ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದವರು:**

1. ಶ್ರೀಮತಿ. ಜ್ಯೋತಿ. ಸದಸ್ಯರು
2. ಶ್ರೀ. ಎಂ.ರಾಮಯ್ಯ ಸದಸ್ಯರು
3. ಶ್ರೀ. ಸುರೇಂದರ್ ಸದಸ್ಯರು
4. ಶ್ರೀಮತಿ. ಪದ್ಮಾವತಿಯಮ್ಮ ಸದಸ್ಯರು
5. ಶ್ರೀ. ಸಪ್ನ ಕಾರೀಮ್ ಸದಸ್ಯರು
7. ಶ್ರೀ. ಡಾ ಮಲ್ಲಿಕಾರ್ಜುನ್ ಬಸಪ್ರಬು ಸದಸ್ಯರು
8. ಶ್ರೀ. ಸೆಂದಿಲ್ ಕುಮಾರ್ ಸದಸ್ಯರು
9. ಶ್ರೀ. ಲೋಕೇಶ್ ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ
10. ಶ್ರೀ. ಎಲ್. ಸುರೇಶ್ ಕಿರಿಯ ಅಭಿಯಂತರರು ವಿಜ್ಞಾನನಗರ
11. ಶ್ರೀ. ರಾಘವೇಂದ್ರ ಹಿರಿಯ ಆರೋಗ್ಯ ಪರಿವೀಕ್ಷಕರು

ಮಾನ್ಯ ಅಧ್ಯಕ್ಷರು ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಡಾ. ಮಲ್ಲಿಕಾರ್ಜುನ ಬಸಪ್ರಭುರವರು ಮತ್ತು ಸಮಿತಿ ಸದಸ್ಯರು ನಾಗರೀಕರ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ್ದು ಘನ ತ್ಯಾಜ್ಯ ನಿರ್ವಹಣೆಯು ಸಮಾಧಾನಕರವಾಗಿಲ್ಲವೆಂದು ಈ ಬಗ್ಗೆ ತುರ್ತು ಗಮನ ಹರಿಸಿ ಕಸ ಸಂಗ್ರಹಣೆ, ವಿಂಗಡಣೆ ಮತ್ತು ವಿಲೇವಾರಿಗಳ ಬಗ್ಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

  ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು

- ಪ್ರತೀ ವಾರ್ಡ್ ಕಮಿಟಿಯ ಸದಸ್ಯರುಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಗುರುತಿನ ಚೀಟಿಯನ್ನು ನೀಡುವ ಬಗ್ಗೆ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಗುರುತಿನ ಚೀಟಿ ನೀಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.

  ಕ್ರಮ: ವಾರ್ಡ್ ಅಭಿಯಂತರರು

- ಬಸವನಗರ ಬಸ್ ನಿಲ್ದಾಣಕ್ಕೆ ಬಿ.ಎಂ.ಟಿ.ಸಿ. ವ್ಯವಸ್ಥೆಯನ್ನು ಈಗಾಗಲೇ ಸ್ಥಗಿತಗೊಳಿಸಿರುವ ಸಾರಿಗೆ ವ್ಯವಸ್ಥೆಯನ್ನು ಪುನರಾರಂಭಿಸುವಂತೆಯೂ ಹಾಗೂ ವಿಜ್ಞಾನನಗರದಿಂದ ಬಸವನಗರಕ್ಕೆ ಮತ್ತು ಬಸವನಗರದಿಂದ ಮುಂದೆ ರಮೇಶ್‌ನಗರದ ಬಿ.ಇ.ಎಂ.ಎಲ್ ಮಾರ್ಕೆಟ್ ವರೆಗೆ ವಿಸ್ತರಿಸಿದಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವುದೆಂದು ಅಭಿಪ್ರಾಯಿಸಲಾಯಿತು. ಈ ಬಗ್ಗೆ ಮಾನ್ಯ ಅಧ್ಯಕ್ಷರ ಮೂಲಕ ಬಿ.ಎಂ.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರನ್ನು ವಿನಂತಿಸಲು ಸೂಚಿಸಲಾಯಿತು.
- ಬಸವನಗರ ಬಸ್ ನಿಲ್ದಾಣ ಮತ್ತು ಮಹದೇವಪುರ ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ವ್ಯವಸ್ಥೆಯನ್ನು ಸುಗಮವಾಗಿ ಇರಿಸಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.

  ಕ್ರಮ: ಠಾಣಾಧಿಕಾರಿಗಳು, ಸಂಚಾರ ವಿಭಾಗ

Scanned by CamScanner

- ಕಾಳಪ್ಪ ಬಡಾವಣೆ ಮತ್ತು ವಿಜ್ಞಾನನಗರದ ದಕ್ಷಿಣ ಭಾಗದ ಮತ್ತು ರಾಮಯ್ಯ ರೆಡ್ಡಿ 2ನೇ ಹಂತ ಮ. ಮಹದೇವಪುರ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಈ ಬಗ್ಗೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡಿ ಒಂದು ವಾರದೊಳಗೆ ಈ ಎಲ್ಲಾ ಅವ್ಯವಸ್ಥೆಯನ್ನು ಸರಿಪಡಿಸುವುದಾಗಿ ತಿಳಿಸಿದರು ಮತ್ತು ಮಹದೇವಪುರ ಬಡಾವಣೆಯಲ್ಲಿ ಒಂದು ಹೊಸ ವಾಲ್ವ್‌ನ್ನು ಅಳವಡಿಸಲು ತುರ್ತು ಕ್ರಮ ವಹಿಸುವುದಾಗಿ ತಿಳಿಸಿದರು

ಕ್ರಮ: ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ.

- ವಿಜ್ಞಾನನಗರದ ಒಳಚರಂಡಿ ವ್ಯವಸ್ಥೆಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿ 15 ಮತ್ತು 16ನೇ ಅಡ್ಡರಸ್ತೆಗಳಲ್ಲಿನ ಒಳಚರಂಡಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

ಕ್ರಮ: ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ.

- ವಾರ್ಡ್ 81ರ ವ್ಯಾಪ್ತಿಯಲ್ಲಿ ಬರುವ ಪಾರ್ಕ್‌ಗಳಲ್ಲಿ ನೀರಿನ ಅಭಾವವನ್ನು ನೀಗಿಸಲು ತುರ್ತಾಗಿ ಬೋರ್‌ವೆಲ್‌ಗಳನ್ನು ಕೊರೆಯುವಂತೆ ಸೂಚಿಸಲಾಯಿತು.

ಕ್ರಮ: ವಾರ್ಡ್ ಅಭಿಯಂತರರು

ಸಮಿತಿಯ ಸದಸ್ಯರು ಮಾತನಾಡಿ ವಾರ್ಡ್ ನಂ. 81ರಲ್ಲಿ ಪ್ರಚಲಿತವಾಗಿರುವ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳ ಒಂದು ಸಭೆಯನ್ನು ದಿನಾಂಕ 23-02-2019ರಂದು ಆಯೋಜಿಸುವಂತೆ ಮಾನ್ಯ ಅಧ್ಯಕ್ಷರನ್ನು ವಿನಂತಿಸಿದರು.

ಕ್ರಮ: ವಾರ್ಡ್ ಅಭಿಯಂತರರು

ಕರಡು ಟಿಪ್ಪಣಿ ಮಾನ್ಯ ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟಿದೆ.

ಕಾರ್ಯದರ್ಶಿಗಳು,
ವಿಜ್ಞಾನನಗರ ವಾರ್ಡ್ ಸಮಿತಿ

ಪ್ರತಿಗಳು:

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ,ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
3. ಕೌನ್ಸಿಲ್ ಕಾರ್ಯದರ್ಶಿಯವರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಘನ ಅವಗಾಹನೆಗಾಗಿ
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಕೆ.ಆರ್.ಪುರ ವಿಭಾಗ ರವರ ಅವಗಾಹನೆಗಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned by CamScanner